ವಿತ್ತ ಸಂಚಿಕೆ
DECEMBER 2024

# INSPIRE INDIA




ಶರಣ್ ಪಾಟೀಲ್
ಆರ್ಥಿಕ ತಜ್ಞರು

## ಸಲಹೆ ನಮ್ಮದು ಹೂಡಿಕೆ ನಿಮ್ಮದು

INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com



ಸರಳವಾಗಿ ಜೀವನ ನಡೆಸುತ್ತ ಒಳ್ಳೆಯ ಕೆಲಸ ಮಾಡುತ್ತ ಹೋದರೆ ಅದಕ್ಕಿಂತ ಉತ್ತಮ ಸಂಗತಿ ಇನ್ನೇನಿದೆ?
–ಸುಧಾ ಮೂರ್ತಿ



ನಿಮ್ಮೆಲ್ಲ ಸಮಸ್ಯೆಗಳನ್ನು ಜೇಬಿಗೆ ತುಂಬಿಕೊಳ್ಳಿ. ಆದರೆ ಆ ಜೇಬಿಗೆ ಒಂದು ತೂತು ಇರುವುದನ್ನು ಖಾತರಿ ಮಾಡಿಕೊಳ್ಳಿ.
–ರಾಬರ್ಟ್ ಫ್ರಾಸ್ಟ್

ನನ್ನ ಅಂತರಂಗದ ವಿಕಾಸವು ಯಾವತ್ತೂ ನನ್ನ ಭೌತಿಕ ವಿಕಾಸ ಮತ್ತು ಸಾಧನೆಗಳಿಗೆ ಸರಿಸಾಟಿಯಾಗಿರಬೇಕು
–ಇಂದು ಜೈನ್



# ಜಗತ್ತಿನ WORRY-ಮಾಡದಿರಲಿ ಸವಾರಿ!



## ಮಾರುಕಟ್ಟೆ ದಿಕ್ಕು ಬದಲಿಸುವ ವಿಶ್ವ ವಿದ್ಯಮಾನಗಳು

**ಜಗತ್ತಿನ** ವಿಶಾಲ ವ್ಯಾಪ್ತಿಯಲ್ಲಿ ನಡೆಯುವ ರಾಜಕೀಯ ಉದ್ವಿಗ್ನತೆಗೆ ಅನೇಕ ಕಾರಣಗಳಿವೆ. ಅದು ಸೇನಾ ಸಂಘರ್ಷವಿರಬಹುದು, ವಾಣಿಜ್ಯ ಕದನ ಅಥ–'ವಾ ರಾಜಕೀಯ ಅಸ್ಥಿರತೆಗಳಿರಬಹುದು. ವಿಶ್ವ ಅರ್ಥ ವ್ಯವಸ್ಥೆಯ ಸಂಕೀರ್ಣ ವಲಯದಲ್ಲಿ ಉಂಟಾಗುವ ಭೌಗೋಳಿಕ ರಾಜಕೀಯ ಪರಿಣಾಮಗಳು ಮತ್ತು ಅಂತಾರಾಷ್ಟ್ರೀಯ ಘಟನೆಗಳು ನಿಚ್ಚಳವಾಗಿ ಕಾಣಿಸುವುದು ಷೇರುಮಾರುಕಟ್ಟೆಯ ಮೇಲೆ. ಇಂತಹ ಬಾಹ್ಯ ವಿಚಾರಗಳು ಮಾರುಕಟ್ಟೆ ಭಾವನೆಗಳನ್ನು ರೂಪಿಸುವಲ್ಲಿ, ಹೂಡಿಕೆದಾರರ ನಡವಳಿಕೆಯ ಮೇಲೆ ಮಹತ್ವದ ಪ್ರಭಾವವನ್ನು ಬೀರುತ್ತವೆ. ಹಾಗಾಗಿ ಇವು ಷೇರುಗಳ ಬೆಲೆಯ ದಿಕ್ಕನ್ನೇ ಬದಲಿಸಬಲ್ಲವು.

ಉಕ್ರೇನ್–ರಷ್ಯಾ ಯುದ್ಧ, ಮಧ್ಯಪ್ರಾಚ್ಯ ಸಂಘರ್ಷದಿಂದ ಆರಂಭಿಸಿ ಈಗ ಚಾಲ್ತಿಯಲ್ಲಿರುವ ಅಮೆರಿಕ ಮತ್ತು ಚೀನಾ ನಡುವಿನ ವಾಣಿಜ್ಯ ಸಂಕಟ ಇವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಮಾರುಕಟ್ಟೆಯ ಮೇಲೆ ಪರಿಣಾಮ ಬೀರುತ್ತ ಬಂದಿವೆ ಎಂಬುದು ದಿಟ. ಈ ಎಲ್ಲ ಬೆಳವಣಿಗೆಗಳು ನಿಜಕ್ಕೂ ತಮ್ಮ ಪೋರ್ಟ್‌ಫೋಲಿಯೊ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂದು ಹೂಡಿಕೆದಾರರು ಚಿಂತಿತರಾಗಿದ್ದಾರೆ. ಭೌಗೋಳಿಕ ರಾಜಕೀಯ ಪರಿಣಾಮಗಳು ಷೇರು ಮಾರುಕಟ್ಟೆಯಲ್ಲಿ ಅಲ್ಪಾವಧಿ ಏರಿಳಿತಕ್ಕೆ ಕಾರಣವಾಗಬಲ್ಲದು. ಜಗತ್ತಿನಲ್ಲಿ ನಡೆಯುವ ಯುದ್ಧ ಸ್ಥಿತಿ, ದಿಗ್ಬಂಧನಗಳು ಅಥವಾ ಜಾಗತಿಕ ವಾಣಿಜ್ಯದ ಗತಿಯಲ್ಲಿ ಬದಲಾವಣೆಯಂತಹ ಸುದ್ದಿಗಳಿಗೆ ಮಾರುಕಟ್ಟೆ ಸಹಜವಾಗಿ ಪ್ರತಿಕ್ರಿಯಿಸುತ್ತದೆ. ಕೆಲವು ವಲಯಗಳು ಹೆಚ್ಚು ಸೂಕ್ಷ್ಮ ಸಂವೇದಿಯಾಗಿರುತ್ತವೆ.


## ಒಳ ಪುಟ ನೋಟ

ನಿಮ್ಮ ಹೂಡಿಕೆ ನಿಮ್ಮ ನಿರ್ಧಾರ- ಸರಿ–ತಪ್ಪಿನ ಲೆಕ್ಕಾಚಾರ



3

ಪ್ರೀತಿಪಾತ್ರರ ರಕ್ಷಣೆಗೆ ಸಮಗ್ರ ಜೀವವಿಮೆ



5

ಈಗ 2024ರಲ್ಲಿಯೇ ನೋಡಿ ಇಂತಹ ಅನೇಕ ಭೌಗೋಳಿಕವಾದ ಉದ್ವಿಗ್ನದ ವಾತಾವರಣಗಳು ನಡೆದವು. ವಾಣಿಜ್ಯ ಸಂಘರ್ಷಗಳು ಮತ್ತು ಇಂಧನ ಸುರಕ್ಷತೆಯ ಕಳವಳ. ಇವೆಲ್ಲವೂ ಜಗತ್ತಿನಾದ್ಯಂತ ಹಣಕಾಸು ಮಾರುಕಟ್ಟೆಗಳ ಮೇಲೆ ಗಮನಾರ್ಹ ಪರಿಣಾಮವನ್ನು ಬೀರಿದವು. ಹಾಗಾಗಿ ಒಬ್ಬ ಹೂಡಿಕೆದಾರನಾಗಿ ಸಹಜವಾಗಿ ಏಳುವ ಪ್ರಶ್ನೆ ಏನೆಂದರೆ; ಈ ಜಾಗತಿಕವಾಗಿ ಉಂಟಾಗುವ ಉದ್ವಿಗ್ನ ವಾತಾವರಣಕ್ಕೆ ನಾವೂ ತಲೆಕೆಡಿಸಿಕೊಳ್ಳಬೇಕೇ?

ಇಂತಹ ಭೌಗೋಳಿಕ ರಾಜಕೀಯ ಅಪಾಯಗಳನ್ನು ನಾವು ಮೀರುವುದಾದರೂ ಹೇಗೆ? ಇಂತಹ ಸಂದರ್ಭದಲ್ಲಿ ಈಕ್ವಿಟಿ ಹೂಡಿಕೆದಾರರು ವಹಿಸಬೇಕಾದ ಕೆಲವು ಕಾರ್ಯತಂತ್ರಗಳು ಇಲ್ಲಿವೆ:

**ಬಂಡವಾಳ ವಿತರಣೆ:** ನಿಮ್ಮ ಪೋರ್ಟ್‌ಫೋಲಿಯೊ ಮೇಲೆ ಭೌಗೋಳಿಕ ರಾಜಕೀಯ ಘಟನೆಗಳು ಗಂಭೀರ ಪರಿಣಾಮ ಬೀರದಂತೆ ತಗ್ಗಿಸಲು ನಿಮ್ಮ ಹೂಡಿಕೆಗಳನ್ನು ನಾನಾ ಆಸ್ತಿ ವರ್ಗಗಳು, ವಲಯಗಳು ಮತ್ತು ಭೌಗೋಳಿಕ ವಲಯಗಳಿಗೆ ವಿತರಣೆ ಮಾಡಬೇಕು.

**ಮರುಸಮತೋಲನದ ಶಕ್ತಿ:** ಮಾರುಕಟ್ಟೆಯಲ್ಲಿ ಕುಸಿತ ಸಂಭವಿಸಿದಾಗ ಭಯಗೊಂಡು ನಿಮ್ಮ ಹೂಡಿಕೆಗಳನ್ನು ಮಾರಾಟ ಮಾಡುವುದು ಸಹಜ. ಆದರೆ ಇಂತಹ ವೇಳೆ ನಿಮ್ಮ ಪೋರ್ಟ್‌ಫೋಲಿಯೊವನ್ನು ಮರು ಸಮತೋಲನಕ್ಕೆ ಒಳಪಡಿಸುವುದು ಉತ್ತಮ ಕಾರ್ಯತಂತ್ರ. ಮಾರುಕಟ್ಟೆಯಲ್ಲಿ ಏರಿಳಿತ ಉಂಟಾದಾಗ ನಿಮ್ಮ ಪೋರ್ಟ್‌ಫೋಲಿಯೊ ಆಸ್ತಿ ಹಂಚಿಕೆ ನಿಮ್ಮ ಮೂಲ ಯೋಜನೆಯಂತೆ ನಡೆಯದೇ ಇರಬಹುದು. ಮರುಸಮತೋಲನ ಕೆಲಸದಿಂದ ಅದು ನಿಮ್ಮ ಹಿಡಿತಕ್ಕೆ ಸಿಗುತ್ತದೆ. ಇಂತಹ ಕ್ರಮಗಳಿಂದ ಶಿಸ್ತುಬದ್ಧವಾದ ಹೂಡಿಕೆ ವಿಧಾನಕ್ಕೆ ಉತ್ತೇಜನ ನೀಡಿದಂತಾಗುತ್ತದೆ ಮತ್ತು ನೀವು ದೀರ್ಘಾವಧಿ ಯೋಜನೆಗೆ ಗಟ್ಟಿಯಾಗಿ ಅಂಟಿಕೊಂಡಿರಲು ಸಹಾಯ ಮಾಡುತ್ತದೆ.

**ದೀರ್ಘಾವಧಿ ಮೇಲೆ ಗಮನ:** ಭೌಗೋಳಿಕ ರಾಜಕೀಯ ಘಟನೆಗಳು ಅಲ್ಪಾವಧಿ ಏರಿಳಿತಕ್ಕೆ ಕಾರಣವಾಗುವುದರಿಂದ ಅವು ಸುದೀರ್ಘ ಕಾಲ ಮಾರುಕಟ್ಟೆಯಲ್ಲಿ ಕರಡಿ ಕುಣಿತ ಸೃಷ್ಟಿಸುವುದಿಲ್ಲ ಅಥವಾ ಅರ್ಥ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಳೇನೂ ಉಂಟಾಗದು. ಉದಾ: ಇತಿಹಾಸದ ದತ್ತಾಂಶಗಳನ್ನು ಗಮನಿಸಿದಾಗ ಯುದ್ಧ, ದಿಗ್ಬಂಧನ ಮತ್ತು ಇತರ ಯಾವುದೇ ಭೌಗೋಳಿಕ ರಾಜಕೀಯ ಘಟನೆಗಳ ಹೊರತಾಗಿಯೂ ಈಕ್ವಿಟಿ ಮಾರುಕಟ್ಟೆ ಕಾಲಕ್ರಮೇಣದಲ್ಲಿ ಚೇತರಿಸಿಕೊಂಡು ಮುನ್ನಡೆ ಸಾಧಿಸಿದ್ದನ್ನು ಕಾಣಬಹುದು.

| ವರ್ಷ | ಘಟನೆ | ಕುಸಿತದ ದಿನಗಳು | ಕುಸಿತದ ಪ್ರಮಾಣ % | ಚೇತರಿಕೆ ದಿನಗಳು | ಗಳಿಕೆ % |
|---|---|---|---|---|---|
| 1991 | ಕೊಲ್ಲಿ ಯುದ್ಧ/ ಭಾರತದ ಹಣಕಾಸು ಬಿಕ್ಕಟ್ಟು | 108 | -38.69 | 182 | 67.34 |
| 1994-96 | ರಿಲಯನ್ಸ್, FII | 814 | -40.72 | 952 | 71.59 |
| 2000-01 | ತಂತ್ರಜ್ಞಾನ ಸಮಸ್ಯೆಗಳು | 588 | -56.18 | 833 | 131.78 |
| 2006 | FII ವಿಕ್ರಯ | 36 | -24.32 | 120 | 33.43 |
| 2008-09 | ವಿಶ್ವ ಹಣಕಾಸು ಬಿಕ್ಕಟ್ಟು | 426 | -60.91 | 605 | 156.04 |
| 2015-16 | ಚೀನಾ ಮಾರುಕಟ್ಟೆ ಕುಸಿತ | 378 | -22.67 | 417 | 30.32 |
| 2020 | ಕೋವಿಡ್–19 ಬಿಕ್ಕಟ್ಟು | 70 | -38.06 | 231 | 65.34 |

ಮೇಲಿನ ಕೋಷ್ಟಕದಲ್ಲಿ ಪ್ರಸ್ತಾಪ ಮಾಡಿದ ಷೇರು ಮಾರುಕಟ್ಟೆ ಪತನದ ಹೊರತಾಗಿ 1991ರ ಜನವರಿಯಿಂದ 2020ರ ಡಿಸೆಂಬರ್ ತನಕ ಸೆನ್ಸೆಕ್ಸ್ ಶೇ.13.75ರಷ್ಟು ಸಂಚಿತ ವಾರ್ಷಿಕ ಪ್ರಗತಿ ದರ (CAGR) ದಾಖಲಿಸಿದೆ. **ಮೂಲ: ಬಿಎಸ್‌ಇ ಇಂಡಿಯಾ.**

**ಹೂಡಿಕೆ ಹೆಚ್ಚಿಸಿ:** ಷೇರು ಮಾರುಕಟ್ಟೆಯಲ್ಲಿ ಕುಸಿತ ಸಂಭವಿಸಿದಾಗ ಹೂಡಿಕೆದಾರರು ಯಾವ ಕಾರಣಕ್ಕೂ ಭಯಕ್ಕೆ ಒಳಗಾಗಬಾರದು. ಬದಲಾಗಿ ಇದನ್ನೊಂದು ಅವಕಾಶವೆಂದು ಭಾವಿಸಿ ಇನ್ನಷ್ಟು ಹೂಡಿಕೆ ಮಾಡಬೇಕು.ಬೆಲೆಗಳು ಕುಸಿದಾಗ ಹೆಚ್ಚು ಹೂಡಿಕೆ ಮಾಡಿದರೆ ಸರಾಸರಿ ಮೌಲ್ಯದಿಂದ ಹೂಡಿಕೆದಾರರು ಪ್ರಯೋಜನ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಮಾರುಕಟ್ಟೆ ಏರಿಳಿತದ ಪರಿಣಾಮವನ್ನು ತಗ್ಗಿಸಬಹುದು.

**ಮಾಹಿತಿ ಇರಲಿ:** ಹೂಡಿಕೆದಾರರಿಗೆ ಭೌಗೋಳಿಕ ರಾಜಕೀಯ ಬೆಳವಣಿಗೆಯ ಬಗ್ಗೆ ಮಾಹಿತಿ ಇರಬೇಕು. ಅದು ಅವರ ಪೋರ್ಟ್‌ಫೋಲಿಯೊ ಮೇಲೆ ಬೀರಬಹುದಾದ ಪರಿಣಾಮದ ಕುರಿತು ಪರಿಜ್ಞಾನವಿರಲಿ. ಹಾಗಂತ ಹೆಡ್‌ಲೈನ್‌ಗಳನ್ನು ನೋಡಿಕೊಂಡು ಹಠಾತ್ ನಿರ್ಧಾರಗಳನ್ನು ಕೈಗೊಳ್ಳುವುದು ತರವಲ್ಲ. ಆದ್ದರಿಂದಮಾರುಕಟ್ಟೆ ಏರುಮುಖದಲ್ಲಿದ್ದಾಗ ಖರೀದಿ ಮಾಡುವುದು ಮತ್ತು ಭಯದಿಂದ ಕಡಿಮೆ ದರಕ್ಕೆ ಮಾರಾಟ ಮಾಡುವ ಸಂಭವವಿರುತ್ತದೆ.

**ಹಣಕಾಸು ಸಲಹೆಗಾರರ ಮಾತು ಕೇಳಿ:** ಜಗತ್ತಿನ ರಾಜಕೀಯ ವಿದ್ಯಮಾನಗಳಿಗೆ ಅಂಜಿ ಅವಸರದ ನಿರ್ಧಾರಗಳನ್ನು ಕೈಗೊಳ್ಳುವುದು ಸುಲಭ. ಆದರೆ ಹಣಕಾಸು ಸಲಹೆಗಳನ್ನು ನೀಡುವವರಿಗೆ ಇದರ ಬಗ್ಗೆ ಉತ್ತಮ ಪರಿಜ್ಞಾನವಿರುತ್ತದೆ.ಸಂಕೀರ್ಣ ಮಾರುಕಟ್ಟೆ ಪರಿಸ್ಥಿತಿಗಳನ್ನು ದಾಟುವ ಪರಿ ಅವರಿಗೆ ಗೊತ್ತಿರುತ್ತದೆ. ಇಂತಹ ಕಾಲಘಟ್ಟದಲ್ಲಿ ಅವರು ಭಾವನಾತ್ಮಕವಾದ ಬೆಂಬಲವನ್ನು ನೀಡಬಲ್ಲರು. ನೀವು ಸಾಧ್ಯವಾದಷ್ಟು ಶಾಂತವಾಗಿರಲು ಮತ್ತು ದೀರ್ಘಾವಧಿ ಹೂಡಿಕೆಯಲ್ಲಿ, ನಿಮ್ಮ ಅಗತ್ಯಗಳಲ್ಲಿ ಗಮನ ಕೇಂದ್ರೀಕರಿಸುವಂತೆ ಮಾಡಬಲ್ಲರು.

**ಬಾಟಮ್ ಲೈನ್:** ಭೌಗೋಳಿಕ ರಾಜಕೀಯ ಉದ್ವಿಗ್ನತೆ ಜಾಗತಿಕ ಷೇರು ಮಾರುಕಟ್ಟೆ ಅವಿಭಾಜ್ಯ ಅಂಗ. ಆದರೆ ಇಂತಹ ವಿದ್ಯಮಾನಗಳ ಬಗ್ಗೆ ಅತಿಯಾಗಿ ಚಿಂತಿಸಿ ಭಾವನಾತ್ಮಕ ನಿರ್ಧಾರಗಳನ್ನು ಕೈಗೊಳ್ಳುವುದರಿಂದ ನಿಮ್ಮ ದೀರ್ಘಾವಧಿ ಅಗತ್ಯಗಳಿಗೆ ಅಡ್ಡಿ ಉಂಟುಮಾಡಬಹುದು. ಹಾಗಾಗಿ ಇಂತಹ ಸಂದರ್ಭದಲ್ಲಿ ಉತ್ತಮ ಮಾರುಕಟ್ಟೆ ಕಾರ್ಯತಂತ್ರಗಳ ಮೂಲಕ ಇಂತಹ ಅಪಾಯಗಳಿಂದ ಪಾರಾಗಲು ಸಾಧ್ಯವಿದೆ.

ಸಂಭಾವ್ಯ ಭೌಗೋಳಿಕ ರಾಜಕೀಯ ಸಮಸ್ಯೆಗಳು ಸಂಭವಿಸಿದಾಗ ಒಬ್ಬ ಈಕ್ವಿಟಿ ಹೂಡಿಕೆದಾರನಾಗಿ ಬಂಡವಾಳ ವಿತರಣೆಯಲ್ಲಿ ವೈವಿಧ್ಯತೆಯನ್ನು ಕಾಯ್ದುಕೊಳ್ಳುವುದು, ದೀರ್ಘಾವಧಿ ಟ್ರೆಂಡ್ ಮೇಲೆ ಗಮನ ನೀಡುವುದು ಮತ್ತು ರಿಸ್ಕ್‌ಗಳನ್ನು ನಿಭಾಯಿಸುವ ಕಾರ್ಯತಂತ್ರವನ್ನು ಪಾಲಿಸುವುದು ಮುಖ್ಯ.ಜಾಗತಿಕ ರಾಜಕೀಯ ಬಿಕ್ಕಟ್ಟು ಯಾವಾಗ ಎದುರಾಗುತ್ತದೆ ಎಂಬುದನ್ನು ಯಾರೊಬ್ಬರೂ ಊಹಿಸಲು ಸಾಧ್ಯವಿಲ್ಲ. ಹಾಗಾಗಿ ಎದುರಾಗಬಹುದಾದ ಅಪಾಯವನ್ನು ಮುಂಗಾಣುವ ಪ್ರಯತ್ನವನ್ನು ಮಾಡಬೇಕು ಮತ್ತು ಅದಕ್ಕೆ ತಕ್ಕಂತೆ ನಿಮ್ಮ ಪೋರ್ಟ್‌ಫೋಲಿಯೋವನ್ನು ಸಿದ್ಧಗೊಳಿಸುವುದು ಮುಖ್ಯ. ಇದರಿಂದ ಪ್ರವಾಹ ಯಾವಾಗಾದರೂ ಬರಲಿ, ಎದುರಿಸಲು ನಾವು ಸಿದ್ಧ ಎಂಬ ಮನಸ್ಥಿತಿ ಸ್ಥಿರಗೊಂಡಿರುತ್ತದೆ.



# ನಿಮ್ಮ ಹೂಡಿಕೆ, ನಿಮ್ಮ ನಿರ್ಧಾರ

## ಸರಿ-ತಪ್ಪಿನ ಲೆಕ್ಕಾಚಾರ

**Do-It-Yourself (DIY)**

ಅಂದರೆ ನಮ್ಮ ಹೂಡಿಕೆಗಳನ್ನು ನಾವೇ ಮಾಡಿಕೊಳ್ಳುವುದು. ಇತ್ತೀಚಿನ ವರ್ಷಗಳಲ್ಲಿ ಇದು ಟ್ರೆಂಡ್ ಆಗುತ್ತಿದೆ. ತಮ್ಮ ಹಣಕಾಸು ನಿರ್ಧಾರಗಳನ್ನು ತಾವೇ ನಿಯಂತ್ರಿಸುವ ಕೆಲಸವನ್ನು ಹೆಚ್ಚು ಹೆಚ್ಚು ಮಂದಿ ಮಾಡುತ್ತಿದ್ದಾರೆ. ನಮ್ಮ ಹೂಡಿಕೆಗಳನ್ನು ನಾವೇ ನಿಭಾಯಿಸಲು ಮುಂದಾದಾಗ ಅದರಿಂದ ರಿಸ್ಕೂ ಇದೆ, ರಿವಾರ್ಡೂ (ಲಾಭ) ಇದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಿದೆ.

**ನಿಯಂತ್ರಣ:** ನಮ್ಮ ಹೂಡಿಕೆಯ ನಿರ್ಧಾರಗಳ ಮೇಲೆ ನಮಗೆ ಸಂಪೂರ್ಣ ಹಿಡಿತವಿರುತ್ತದೆ.

**ಅಧಿಕ ಆದಾಯದ ಸಾಧ್ಯತೆ:** ಮಾರುಕಟ್ಟೆಯ ಅದಕ್ಷತೆ ಅಥವಾ ಅಪಮೌಲ್ಯದ ಆಸ್ತಿಗಳ ಪ್ರಯೋಜನ ಪಡೆದುಕೊಳ್ಳುವ ಮೂಲಕ ಇಂತಹ ಹೂಡಿಕೆದಾರರು ಸಕ್ರಿಯ ನಿರ್ವಹಣೆಯ ಮೂಲಕ ಹೆಚ್ಚು ಲಾಭವನ್ನು ಪಡೆಯುವ ಸಾಧ್ಯತೆ ಇರುತ್ತದೆ.

**ಕಡಿಮೆ ವೆಚ್ಚ:** ತಮ್ಮ ಹೂಡಿಕೆಯನ್ನು ತಾವೇ ಮಾಡುವವರು ಹಣಕಾಸು ಸಲಹೆಗಾರರು ಸಾಮಾನ್ಯವಾಗಿ ಮಾಡುವ ನಿರ್ವಹಣಾ ಶುಲ್ಕ ಮತ್ತು ಕಮಿಷನ್‌ಗಳನ್ನು ಪಾವತಿ ಮಾಡಬೇಕಾದ ಅಗತ್ಯವಿರುವುದಿಲ್ಲ.

**ಕಲಿಕೆಯ ಅವಕಾಶ:** ಸ್ವಯಂ ಹೂಡಿಕೆದಾರರು ತಾವೇ ಹೂಡಿಕೆ ಮಾಡುತ್ತ ಹಣಕಾಸು ಮಾರುಕಟ್ಟೆ, ಹೂಡಿಕೆ ಕಾರ್ಯತಂತ್ರಗಳು ಮತ್ತು ವೈಯಕ್ತಿಕ ಹಣಕಾಸು ನಿರ್ವಹಣೆಯನ್ನು ಕಲಿಯುತ್ತ ಹೋಗುತ್ತಾರೆ. ಇದರಿಂದ ವ್ಯಕ್ತಿಗಳು ಇನ್ನಷ್ಟು ಹಣಕಾಸು ಸಾಕ್ಷರತೆ ಪಡೆಯುತ್ತಾರೆ.

ಸ್ವಯಂ ಹೂಡಿಕೆದಾರರಿಗೆ ಇರುವ ಅಪಾಯಗಳು ಯಾವುವು ಎಂಬುದನ್ನು ಗಮನ ಹರಿಸೋಣ. ತಮ್ಮ ಹೂಡಿಕೆಯನ್ನು ತಾವೇ ಮಾಡುವುದಕ್ಕೂ ಮುನ್ನ ಈ ಕೆಳಗಿನ ಅಂಶಗಳನ್ನು ಗಮನಿಸುವುದು ಉತ್ತಮ.

**ಸಮಯದ ಬದ್ಧತೆ:** ಯಶಸ್ವಿ ಹೂಡಿಕೆಗೆ ಮುಖ್ಯವಾಗಿ ಬೇಕಾಗಿರುವುದು ಸಾಕಷ್ಟು ಸಮಯ ಮತ್ತು ಸಂಶೋಧನೆ ನಡೆಸುವ ಸಾಮರ್ಥ್ಯ. ಇಂತಹ ಸಂಶೋಧನೆ ಮತ್ತು ವಿಶ್ಲೇಷಣೆ ನಡೆಸಲು ಸಾಕಷ್ಟು ಸಮಯ ಹಾಗೂ ಶಕ್ತಿ ಇದೆಯೇ?

**ಭಾವನಾತ್ಮಕ ನಿರ್ಧಾರ:** ಹೂಡಿಕೆ ವಿಚಾರದಲ್ಲಿ ಕೈಗೊಳ್ಳುವ ನಿರ್ಧಾರಗಳ ಮೇಲೆ ಭಾವನಾತ್ಮಕ ಪೂರ್ವಗ್ರಹಗಳ ಛಾಯೆ ಆವರಿಸಬಹುದು. ಇದರಿಂದ ಅವಸರದ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇರುತ್ತದೆ.ಮಾರುಕಟ್ಟೆಯಲ್ಲಿ ಏರಿಳಿತದ ಅಲೆ ಎದ್ದಾಗ ಶಾಂತ ಮನಸ್ಥಿತಿ ಕಾಯ್ದುಕೊಳ್ಳಲು ಸಾಧ್ಯವೇ?

**ಅವಕಾಶದ ವೆಚ್ಚ:** ಸ್ವಯಂ ಹೂಡಿಕೆ ಮೇಲೆ ಮಾಡುವ ಸಮಯವನ್ನು ಇತರ ಪ್ರಯತ್ನಗಳ ಮೇಲೆ ಮಾಡುವುದು ಸೂಕ್ತ. ವೃತ್ತಿ ಜೀವನದ ಮುನ್ನಡೆ ಅಥವಾ ವೈಯಕ್ತಿಕ ಆಸಕ್ತಿಗಳು ಇತ್ಯಾದಿ. ಹಣಕಾಸು ಪರಿಕಲ್ಪನೆಗಳು, ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿರುವ ಟ್ರೆಂಡ್ ಮತ್ತು ಹೂಡಿಕೆ ಕಾರ್ಯತಂತ್ರ ಮುಖ್ಯ. ಮಾಹಿತಿಪೂರ್ಣ ನಿರ್ಧಾರಗಳನ್ನು ಕೈಗೊಳ್ಳಲು ಹಣಕಾಸು ಜ್ಞಾನ ಮತ್ತು ಕೌಶಲ ಇದೆಯೇ ಎಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು.

**ಬಂಡವಾಳ ವಿತರಣೆ ರಿಸ್ಕ್:** ಸೂಕ್ತ ಕಾರ್ಯತಂತ್ರಗಳಿಲ್ಲದೆ ಸ್ವಯಂ ಹೂಡಿಕೆದಾರರು ತಮ್ಮ ಪೋರ್ಟ್‌ಫೋಲಿಯೊವನ್ನು ಸಮರ್ಪಕವಾಗಿ ನಿರ್ವಹಣೆ ಮಾಡದೇ ಇರುವ ಸಾಧ್ಯತೆ ಇರುತ್ತದೆ. ಇದರಿಂದ ಎದುರಾಗುವ ಅಪಾಯ ದೊಡ್ಡದು. ತಜ್ಞರ ಸಲಹೆ ಇಲ್ಲದೆ ಪೋರ್ಟ್‌ಫೋಲಿಯೊವನ್ನು ಸ್ವತಂತ್ರವಾಗಿ ನಿಭಾಯಿಸಲು ಸಾಧ್ಯವೇ?

**ನಿಯಂತ್ರಣ ಜ್ಞಾನ:** ಹೂಡಿಕೆಯ ನಿಬಂಧನೆಗಳು ಹಾಗೂ ತೆರಿಗೆ ಪರಿಣಾಮಗಳು ಜಟಿಲವಾಗಿರುವ ಸಾಧ್ಯತೆಗಳಿರುತ್ತವೆ. ಇಂತಹ ಮಹತ್ವದ ಬಾಧ್ಯತೆಗಳು ಕಣ್ತಪ್ಪುವ ಅಪಾಯವಿರುತ್ತದೆ.

ನಮ್ಮ ಹೂಡಿಕೆಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸುವ ಬಗ್ಗೆ ಖಾತರಿ ಇಲ್ಲದಿದ್ದರೆ

ಹಣಕಾಸು ಸಲಹೆಗಾರರಿಂದ ವೃತ್ತಿಪರವಾದ ಸಲಹೆಗಳನ್ನು ಪಡೆದುಕೊಳ್ಳುವುದು ಉತ್ತಮ

**ಹಣಕಾಸು ಸಲಹೆಗಾರನ ಪಾತ್ರ:** ಒಬ್ಬ ಹೂಡಿಕೆದಾರನ ಹಣಕಾಸು ಜರ್ನಿಯಲ್ಲಿ ಹಣಕಾಸು ಸಲಹೆಗಾರನ ಪಾತ್ರ ಪ್ರಮುಖವಾದುದು. ಅವರು ಹೂಡಿಕೆದಾರ ಮತ್ತು ಹೂಡಿಕೆ ಉತ್ಪನ್ನಗಳ ನಡುವೆ ಸೇತುವೆಯಾಗಿ ಕೆಲಸ ಮಾಡುತ್ತಾರೆ. ಹೂಡಿಕೆದಾರರು ಮಾಹಿತಿಪೂರ್ಣ ನಿರ್ಧಾರ ಕೈಗೊಳ್ಳುವಂತೆ ನೆರವಾಗುತ್ತಾರೆ.

ಹಣಕಾಸು ಸಲಹೆಗಾರನ ಪಾತ್ರಗಳು ಮತ್ತು ಜವಾಬ್ದಾರಿಗಳು ಏನು ಎಂಬುದನ್ನು ನೋಡೋಣ:

**ಹೂಡಿಕೆದಾರನ ಅಗತ್ಯಗಳು:** ಪ್ರತಿಯೊಬ್ಬ ಹೂಡಿಕೆದಾರನಿಗೂ ವಿಭಿನ್ನವಾದ ಅಗತ್ಯಗಳಿರುತ್ತವೆ. ಸಲಹೆಗಾರರು ಹೂಡಿಕೆದಾರರ ಸದ್ಯದ ಹಣಕಾಸು ಪರಿಸ್ಥಿತಿಗಳಾದ ಆದಾಯ, ವೆಚ್ಚ, ಆಸ್ತಿ ಮತ್ತು ಒಟ್ಟು ಹಣಕಾಸು ಆರೋಗ್ಯದ ಪರಿಣಾಮ ಬೀರುವ ಬಾಧ್ಯತೆಗಳ ಬಗ್ಗೆ ಸೂಕ್ತವಾಗಿ ಬೆಳಕು ಚೆಲ್ಲಬಲ್ಲರು. ಶಿಕ್ಷಣ, ಮನೆ ಖರೀದಿ, ನಿವೃತ್ತಿ ಅಥವಾ ಜೀವನದ ಇತರ ಮಹತ್ವದ ಘಟನೆಗಳ ವಿಚಾರದಲ್ಲಿ ಹಣಕಾಸು ಸಲಹೆಗಾರರು ನಿಖರವಾದ ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತಾರೆ. ಇಂತಹ ಅಗತ್ಯಗಳನ್ನು ಗುರುತಿಸಿದರೆ ಅವುಗಳ ಆದ್ಯತೆಯ ಆಧಾರದಲ್ಲಿ ಹೂಡಿಕೆಯ ಮೊತ್ತವನ್ನು ನಿರ್ಧರಿಸಲು ಅವರು ಸಲಹೆ ನೀಡುತ್ತಾರೆ.

**ಸೂಕ್ತ ಆಸ್ತಿ ಹಂಚಿಕೆ:** ಹೂಡಿಕೆದಾರರ ವಿಶಿಷ್ಟ ಅಗತ್ಯಗಳಿಗೆ ತಕ್ಕಂತೆ ಸಲಹೆಗಾರರು ಹೂಡಿಕೆ ಕಾರ್ಯತಂತ್ರಗಳನ್ನು ರೂಪಿಸುತ್ತಾರೆ. ಹೂಡಿಕೆದಾರರ ರಿಸ್ಕ್ ಸಹಿಸಿಕೊಳ್ಳುವ ಸಾಮರ್ಥ್ಯ, ಹಣಕಾಸು ಅಗತ್ಯಗಳು ಮತ್ತು ಸಮಯದ ಮಿತಿಗಳನ್ನು ಅರ್ಥ ಮಾಡಿಕೊಂಡು ಸಲಹೆಗಳನ್ನು ನೀಡುತ್ತಾರೆ. ರಿಸ್ಕ್ ಮತ್ತು ರಿವಾರ್ಡ್ ನಡುವೆ ಸಮತೋಲನ ಕಾಯ್ದುಕೊಂಡು ವೈವಿಧ್ಯಮಯವಾದ ಪೋರ್ಟ್‌ಫೋಲಿಯೊವನ್ನು ರೂಪಿಸಬಲ್ಲರು. ಇದರಿಂದ ಮ್ಯುಚ್ಯುಯಲ್ ಫಂಡ್, ಷೇರು, ಬಾಂಡ್ ಮುಂತಾದ ಅನೇಕ ಆಸ್ತಿ ವರ್ಗಗಳಲ್ಲಿ ಎಚ್ಚರಿಕೆಯಿಂದ ಹಂಚಿಕೆ ಮಾಡುವಂತೆ ಸಲಹೆ ಮಾಡಲು ಸಾಧ್ಯವಾಗುತ್ತದೆ. ರಿಸ್ಕ್ ತಗ್ಗಿ ಆದಾಯ ಹೆಚ್ಚಲು ಇದು ದಾರಿ ಮಾಡಿಕೊಡುತ್ತದೆ.

**ಅಸ್ಥಿರತೆಯಲ್ಲಿ ಸಂಯಮ:** ಹಣಕಾಸು ಮಾರುಕಟ್ಟೆಯಲ್ಲಿ 'ರೋಲರ್ ಕೋಸ್ಟರ್' ಅನುಭವಗಳು ಆಗುತ್ತಿರುತ್ತವೆ. ಊಹಿಸಲಾಗದ ರೀತಿಯಲ್ಲಿ ಏರಿಳಿತಗಳು ಸಂಭವಿಸುತ್ತವೆ. ಇಂತಹ ಕಾಲಘಟ್ಟದಲ್ಲಿ ಭಯ ಮತ್ತು ದುರಾಸೆ ಹೂಡಿಕೆದಾರರ ನಿರ್ಧಾರಗಳ ಮೇಲೆ ಪರಿಣಾಮ ಬೀರಬಹುದು. ಸರಿಯಾದ ಮಾರ್ಗದರ್ಶನ ಇಲ್ಲದೇ ಹೋದರೆ ಮಾರುಕಟ್ಟೆ ಎತ್ತ ಸಾಗುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗುತ್ತದೆ. ಹಣಕಾಸು ಸಲಹೆಗಾರರು ಮಾರುಕಟ್ಟೆಯಲ್ಲಿ ಉಂಟಾದ ಕುಸಿತವನ್ನೇ ಅವಕಾಶವಾಗಿ ಪರಿವರ್ತಿಸಿ ದೀರ್ಘಾವಧಿ ಪ್ರಗತಿಗೆ ದಾರಿಮಾಡಿಕೊಡಬಲ್ಲರು. ಅಸ್ಥಿರತೆಯ ಸಂದರ್ಭದಲ್ಲಿ ತರ್ಕಬದ್ಧವಾಗಿ ಯೋಚಿಸುವ ಸಲಹೆಗಾರರು ಆಧಾರಸ್ತಂಭವಾಗಿ ಕೆಲಸ ಮಾಡುತ್ತಾರೆ. ತಮ್ಮ ಗ್ರಾಹಕರು ತಮ್ಮ ಹಣಕಾಸು ಗುರಿಗಳಲ್ಲಿ ಹೆಚ್ಚು ಗಮನಹರಿಸುವಂತೆ ಮಾಡುತ್ತಾರೆ.




**ನಿಬಂಧನೆಗಳ ಪಾಲನೆ:** ಸಲಹೆಗಾರರು ಎಲ್ಲ ಗ್ರಾಹಕರ ಜೊತೆ ನಡೆಸಿದ ಚರ್ಚೆ, ವಹಿವಾಟುಗಳು ಹಾಗೂ ಹೂಡಿಕೆ ನಿರ್ಧಾರಗಳನ್ನು ಎಚ್ಚರಿಕೆಯಿಂದ ಕಾಯ್ದಿಟ್ಟಿರುತ್ತಾರೆ. ಇದರಿಂದ ಪಾರದರ್ಶಕತೆ, ವಿಶ್ವಾಸರ್ಹತೆ ಮತ್ತು ಕೈಗಾರಿಕಾ ನಿಯಮಗಳ ಪಾಲನೆಯನ್ನು ಖಾತರಿ ಪಡಿಸಲಾಗುತ್ತದೆ. ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದರಿಂದ ಸಲಹೆಗಾರರು ಹೂಡಿಕೆದಾರರ ಹಿತಾಸಕ್ತಿಗಳನ್ನು ರಕ್ಷಿಸಿ ವೃತ್ತಿಪರತೆಯ ಉನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ.

**ಅಲ್ಪಾವಧಿ ನಿರ್ವಹಣೆ ಮೀರಿ:** ಹಿಂದಿನ ನಿರ್ವಹಣೆಯು ಉಪಯುಕ್ತ ಸೂಚಕವಾಗಿದ್ದರೂ ಕೂಡ ಅದು ಭವಿಷ್ಯದ ಫಲಿತಾಂಶಗಳ ಸೂಚಕವಲ್ಲ. ಹೂಡಿಕೆದಾರರು ಕೇವಲ ಅಲ್ಪಾವಧಿ ಅಸ್ಥಿರತೆಯ ಮೇಲೆಯೇ ಸಂಪೂರ್ಣ ಗಮನ ಹರಿಸುವುದರಿಂದ ದೀರ್ಘಾವಧಿ ಗುರಿಗಳ ಕಡೆಗೆ ದೃಷ್ಟಿ ನೆಡಲು ಸಾಧ್ಯವಾಗುವುದಿಲ್ಲ. ದೀರ್ಘಾವಧಿ ದೃಷ್ಟಿಕೋನ ಮತ್ತು ವೈವಿಧ್ಯದಿಂದ ಕೂಡಿದ ಪೋರ್ಟ್‌ಫೋಲಿಯೊಗೆ ಆದ್ಯತೆಯನ್ನು ನೀಡುವುದು ಹೆಚ್ಚು ಸುಸ್ಥಿರ ವಿಧಾನವಾಗಿದೆ. ಇದರಿಂದ ರಿಸ್ಕ್‌ಗಳನ್ನು ಸಹಿಸಿಕೊಳ್ಳುವುದು ಹಾಗೂ ಹಣಕಾಸು ಗುರಿಗಳನ್ನು ಸಾಧಿಸುವುದು ಸುಲಭವಾಗುತ್ತದೆ.

**ಪೋರ್ಟ್‌ಫೋಲಿಯೊ ಪರಾಮರ್ಶೆ:** ಮಾರುಕಟ್ಟೆ ಪರಿಸ್ಥಿತಿಗಳು ನಿರಂತರ ಬದಲಾಗುತ್ತಲೇ ಇರುತ್ತದೆ. ಹಾಗಾಗಿ ನಿಮ್ಮ ಹೂಡಿಕೆ ಪೋರ್ಟ್‌ಫೋಲಿಯೊವನ್ನು ಆಗಾಗ ಪರಾಮರ್ಶೆ ಹಾಗೂ ಮರುಸಮತೋಲನ ಮಾಡುವುದು ಅತ್ಯಗತ್ಯ. ಮಾರುಕಟ್ಟೆ ಟ್ರೆಂಡ್ ಮೇಲ್ವಿಚಾರಣೆ, ಪೋರ್ಟ್‌ಫೋಲಿಯೊ ನಿರ್ವಹಣೆಯ ಮೌಲ್ಯನಿರ್ಣಯ ಹಾಗೂ ಅಗತ್ಯ ಹೊಂದಾಣಿಕೆಗಳನ್ನು ಮಾಡುವುದರಿಂದ ನಿಮ್ಮ ಹಣಕಾಸು ಅಗತ್ಯಗಳಿಗೆ ತಕ್ಕಂತೆ ಹೂಡಿಕೆ ಮಾಡಲು ಸಲಹೆಗಾರರು ಪ್ರಮುಖ ಪಾತ್ರವಹಿಸುತ್ತಾರೆ. ಮಾರುಕಟ್ಟೆಯಲ್ಲಿ ಏನೇ ಬದಲಾವಣೆಗಳು ಉಂಟಾದರೆ ಅದರ ಬಗ್ಗೆ ಹೂಡಿಕೆದಾರರಿಗೆ ವರದಿ ಮತ್ತು ಒಳನೋಟಗಳನ್ನು ಒದಗಿಸಲು ಸಾಧ್ಯವಾಗುತ್ತದೆ.

ಈ ಎಲ್ಲ ಹಿನ್ನೆಲೆಯಲ್ಲಿ ಹೂಡಿಕೆಯಲ್ಲಿ ಸಮತೋಲನವನ್ನು ಕಾಯ್ದುಕೊಂಡು ಹೂಡಿಕೆ ನಿರ್ಧಾರಗಳ ಮೇಲೆ ಭಯ ಸವಾರಿ ಮಾಡದಂತೆ ತಡೆಯಬಹುದು.

**ಬಾಟಮ್ ಲೈನ್:** ಅಂತಿಮವಾಗಿ ಸ್ವಯಂ ಹೂಡಿಕೆ ನಿರ್ಧಾರಗಳು ಯಾವತ್ತೂ ವ್ಯಕ್ತಿಗತವಾದುದು. ಸಂಭವನೀಯ ಪ್ರಯೋಜನ ಮತ್ತು ಅಪಾಯಗಳನ್ನು ಬಹುಎಚ್ಚರಿಕೆಯಿಂದ ನಿಭಾಯಿಸುವುದು ಮುಖ್ಯ. ಅದು ಹಣಕಾಸು ಗುರಿ ಮತ್ತು ಅಪಾಯವನ್ನು ಸಹಿಸಿಕೊಳ್ಳಲು ನೆರವಾಗುತ್ತದೆ.



# ಪ್ರೀತಿಪಾತ್ರರ ರಕ್ಷಣೆಗೆ

# ಸಮಗ್ರ ಜೀವವಿಮೆ

**ಮಾನವನ ಬದುಕು ತಂತಿಯ ಮೇಲಿನ ನಡಿಗೆ. ಯಾವತ್ತು ಸಮತೋಲನ ತಪ್ಪಿ ಲಗಾಟಿ ಹೊಡೆಯುತ್ತದೋ ತಿಳಿಯದು. ಜೀವನ ಅದೆಷ್ಟು ಅನಿಶ್ಚಿತ ಎಂಬ ಪಾಠವನ್ನು ನಮಗೆಲ್ಲ ಕೋವಿಡ್ ಕಲಿಸಿಹೋಗಿದೆ. ಹಾಗಾಗಿ ಅಂತಹುದೊಂದು ಬಿಕ್ಕಟ್ಟು ನಮ್ಮ ಮುಂದೆ ಪ್ರತ್ಯಕ್ಷವಾಗಿ ಅದ–ರಿಂದ ನಾವೆಲ್ಲ ಪಾರಾಗಿದ್ದೇ ಒಂದು ವರವೆಂದು ಭಾವಿಸಬೇಕು. ಇಂತಹ ಅನಿಶ್ಚಿತ ಪರಿಸ್ಥಿತಿಯಲ್ಲಿ ನಾವು ಕೈಯಿಡಬೇಕಾದುದು ಒಂದು ಜೀವವಿಮಾ ಪಾಲಿಸಿಯ ಮೇಲೆ. ಎಂಥಾ ಜೀವವಿಮೆ? ಒಂದು ಸಮಗ್ರ ಜೀವವಿಮೆ. ಒಬ್ಬ ಯಜಮಾನನ ಗೈರುಹಾಜರಿಯಲ್ಲಿ ಕುಟುಂಬದ ಹಣಕಾಸು ಯೋಗಕ್ಷೇಮದ ರಕ್ಷಣೆ ಮಾಡುವಂತಹ ವಿಮಾ ಪಾಲಿಸಿ. ಅದರ ವಿವರಗಳ ಮೇಲೆ ಒಂದು ಕಣ್ಣಾಡಿಸೋಣ ಬನ್ನಿ...**

**ಕೋವಿಡ್–19** ಪ್ಯಾಂಡಮಿಕ್ ಎಲ್ಲರಿಗೆ ಎಚ್ಚರಿಕೆಯ ಕರೆಗಂಟೆಯನ್ನು ಬಾರಿಸಿದೆ. ಆ ಮೂಲಕ ಜೀವವಿಮೆಯ ಅಗತ್ಯತೆಯನ್ನು ಒತ್ತಿ ಹೇಳಿದೆ. ಅದರಲ್ಲೂ ಮುಖ್ಯವಾಗಿ 'ಟರ್ಮ್ ಜೀವವಿಮೆ'ಗೆ ಬೇಡಿಕೆ ಹೆಚ್ಚುವಂತೆ ಮಾಡಿದೆ. ಇದು ಕೈಗೆಟಕುವ ದರದಲ್ಲಿ ಹೆಚ್ಚಿನ ಸೌಲಭ್ಯವನ್ನು ಒದಗಿಸುವುದು ಇನ್ನೊಂದು ಪ್ಲಸ್‌ಪಾಯಿಂಟ್. ಇವೆಲ್ಲವೂ ಕೋವಿಡ್ ಬಿಕ್ಕಟ್ಟು ತಂದ ವರವೆಂದೇ ಭಾವಿಸಬೇಕು. ಆದರೆ ಕೇವಲ ಜೀವವಿಮೆ ಪಾಲಿಸಿಯನ್ನು ಮಾಡುವುದು ಮಾತ್ರ ಮುಖ್ಯವಲ್ಲ, ನಿಮ್ಮ ಗೈರುಹಾಜ–ರಿಯಲ್ಲಿ ಕುಟುಂಬದ ಹಣಕಾಸು ಯೋಗಕ್ಷೇಮದ ರಕ್ಷಣೆ ಮಾಡಲು ಸಮಗ್ರ ಸೌಲಭ್ಯವಿರುವ ಖಾತರಿ ಮಾಡಿಕೊಳ್ಳುವುದು ಮುಖ್ಯ.

**ಆದಾಯದಿಂದ ಆಚೆಗೆ:** ನಿಮ್ಮ ಮಾನವ ಜೀವನ ಮೌಲ್ಯ (ಎಚ್.ಎಲ್.ವಿ)ವನ್ನು ಅರ್ಥ ಮಾಡಿಕೊಳ್ಳುವುದು.

ಸಾಂಪ್ರದಾಯಿಕವಾಗಿ ಜೀವವಿಮೆಯ ಅಗತ್ಯವು ಆದಾಯವನ್ನು ಆಧರಿಸಿದ್ದಾಗಿದೆ. ಆದರೆ ಈ ಎಚ್–ಎಲ್‌ವಿ ವಿಧಾನವು ಮತ್ತಷ್ಟು ಸಮಗ್ರ ವಿಧಾನವನ್ನು ಹೊಂದಿದೆ. ಇದರಲ್ಲಿ ನಿಮ್ಮ ಭವಿಷ್ಯದ ಗಳಿಕೆಯ ಸಾಮರ್ಥ್ಯ, ಸದ್ಯದ ವೆಚ್ಚಗಳು. ಈಗಿರುವ ಸಾಲ ಮತ್ತು ಹೂಡಿಕೆಗಳು ತಳಕುಹಾಕಿಕೊಂಡಿದೆ. ಇದ–ರಿಂದ ನಿಮ್ಮ ಕುಟುಂಬದ ಒಟ್ಟು ಹಣಕಾಸು ಮೌಲ್ಯ ಏನು ಎಂಬುದು ನಿರ್ಧಾರವಾಗುತ್ತದೆ. ನಿಮಗೆ ಬೇಕಾಗಿರುವ ಸೌಲಭ್ಯವು ನಿಮ್ಮ ಈಗಿನ ಆದಾಯವನ್ನು ನೆಚ್ಚಿಕೊಂಡಿಲ್ಲ, ಬದಲಾಗಿ ನಿಮ್ಮ ಭವಿಷ್ಯ ಗಳಿಕೆಯ ಸಾಮರ್ಥ್ಯವನ್ನು ಅವಲಂಬಿಸಿದೆ.

**ಆದಾಯದ ಬದಲಾವಣೆ: ನೇರಾನೇರ ವಿಧಾನ**–ಈ ಆದಾಯ ಬದಲಾವಣೆ ವಿಧಾನವು ಕಳೆದು ಹೋದ ಆದಾಯವನ್ನು ಭರ್ತಿಮಾಡುವುದರ ಕಡೆಗೆ ಗಮನ ಹರಿಸುತ್ತದೆ. ನಿಮಗೆ ಅಗತ್ಯವಿರುವ ವಿಮಾ ಕವರೇಜ್‌ನ್ನು ಲೆಕ್ಕಹಾಕಲು ನಿಮ್ಮ ನಿವೃತ್ತಿಯ ವರೆಗೆ ಇರುವ ಉಳಿದ ವರ್ಷಗಳಿಂದ ಈಗಿನ ವಾರ್ಷಿಕ ಆದಾಯವನ್ನು ಗುಣಿಸಿ. ಈ ವಿಧಾನ ತುಂಬಾ ಸರಳ. ಆದರೆ, ನಿಮ್ಮ ಭವಿಷ್ಯದ ಆದಾಯ ಬೆಳೆದರೆ ಅದರ ಜೊತೆಗೆ ನಿಮ್ಮ ಅಗತ್ಯಗಳೂ ಬೆಳೆದೀತು.

**ಪ್ರತಿ ವೆಚ್ಚಕ್ಕೂ ಲೆಕ್ಕವಿರಲಿ: ಸಮಗ್ರ ವಿಧಾನ** ವೆಚ್ಚವನ್ನು ಭರ್ತಿಮಾಡುವ ವಿಧಾನವನ್ನು ಹಣಕಾಸು ಯೋಜನೆ ರೂಪಿಸುವವರು ಅನುಮೋದಿಸುತ್ತಾರೆ. ಇಲ್ಲಿ ನೀವು ನಿಮ್ಮ ಕುಟುಂಬದ ಈಗಿನ ವೆಚ್ಚಗಳು, ಮಕ್ಕಳ

ಶಿಕ್ಷಣದಂತಹ ಭವಿಷ್ಯದ ಗುರಿಗಳನ್ನು ಹಾಗೂ ಅವಲಂಬಿತರಿಗೆ ಸಂಭಾವ್ಯ ಬೆಂಬಲಕ್ಕಾಗುವ ಖರ್ಚುಗಳನ್ನು ಲೆಕ್ಕ ಹಾಕಬೇಕು. ಹಾಗೆ ಬಂದ ಮೊತ್ತದಿಂದ ನಿಮ್ಮ ಈಗಿನ ಹೂಡಿಕೆಗಳು ಹಾಗೂ ಜೀವವಿಮೆ ಮೊತ್ತವನ್ನು ಕಳೆಯಬೇಕು. ಬಂದ ಫಲಿತಾಂಶವು ನಿಮಗೆ ಅಗತ್ಯವಿರುವ ಹೆಚ್ಚುವರಿ ಕವರೇಜ್‌ನ್ನು ಸೂಚಿಸುತ್ತದೆ. ಈ ವಿಧಾನವು ನಿಮ್ಮ ಕುಟುಂಬ ಹಣಕಾಸು ಅಗತ್ಯಗಳ ಸಮಗ್ರ ಚಿತ್ರಣವನ್ನು ನೀಡುತ್ತದೆ.

**ಖಾತರಿದಾರನ ವಿಧಾನ:** ನಿಮ್ಮ ವಾರ್ಷಿಕ ಆದಾಯದಲ್ಲಿ ಶೇ.10ರಿಂದ 15ರಷ್ಟು ಜೀವವಿಮಾ ಕವರೇಜ್ ಇರಬೇಕು ಎಂದು ಉದ್ಯಮವು ಸಲಹೆ ಮಾಡುತ್ತದೆ. ಆದರೆ ಭವಿಷ್ಯದ ಹಣ ದುಬ್ಬರವನ್ನು ಗಮನದಲ್ಲಿ ಇಟ್ಟುಕೊಂಡು ನಿಮ್ಮ ವಾರ್ಷಿಕ ವೆಚ್ಚದಲ್ಲಿ ಶೇ.12ರಿಂದ 15ರಷ್ಟು ಕವರೇಜ್ ಇರಬೇಕು ಎಂದು ಹಣಕಾಸು ಮಾರ್ಗದರ್ಶಕರು ಸಲಹೆ ಮಾಡುತ್ತಾರೆ.

**ಜೀವನದ ಬದಲಾವಣೆ ಗತಿಯೊಂದಿಗೆ ಹೆಜ್ಜೆ:** ಜೀವನ ಪ್ರಗತಿ ಹೊಂದುತ್ತಲೇ ನಿಮ್ಮ ಹಣಕಾಸು ಅಗತ್ಯಗಳು ವಿಕಾಸಗೊಳ್ಳುತ್ತ ಹೋಗುತ್ತವೆ ಕೂಡ. ಮದುವೆ, ಮಕ್ಕಳು ಅಥ–ವಾ ಉದ್ಯೋಗದ ಪ್ರಗತಿ ನಿಮ್ಮ ಮಾನವ ಜೀವನ ಮೌಲ್ಯವನ್ನು ಹೆಚ್ಚಿಸಬಹುದು. ಇಂತಹ ಸಂದರ್ಭದಲ್ಲಿ ನಿಮ್ಮ ಕವರೇಜ್‌ಗಳನ್ನು ಪರಾಮರ್ಶೆ ಮಾಡುವುದರಿಂದ ಅದು ಪರಿಪೂರ್ಣತೆಯನ್ನು ಕಾಯ್ದುಕೊಳ್ಳುತ್ತದೆ.



ಜೀವನದ ಮಹತ್ವದ ಹಂತಗಳಲ್ಲಿ ನಿಮ್ಮ ಒಟ್ಟು ಮೊಬಲಗನ್ನು ಹೆಚ್ಚಿಸಲು ಅನೇಕ ಪಾಲಿಸಿಗಳು 'ಸೌಲಭ್ಯದ ಹೆಚ್ಚಳ'ದ ಆಯ್ಕೆಯನ್ನೂ ನಮ್ಮ ಮುಂದೆ ಮಂಡಿಸುತ್ತವೆ. ಆದರೆ ಅದಕ್ಕೆ ತಕ್ಕಂತೆ ನಿಮ್ಮ ಪ್ರೀಮಿಯಂ ಮೊತ್ತದಲ್ಲಿಯೂ ಏರಿಕೆಯಾಗುತ್ತದೆ ಎನ್ನುವುದು ಬೇರೆಯೇ ಮಾತು.

**ಸರಿಹೊಂದಿಕೆಯೇ ಮುಖ್ಯ: ಕನಿಷ್ಠ ಮಟ್ಟಕ್ಕೆ ತೃಪ್ತಿಪಡದಿರಿ** ಜೀವವಿಮಾ ಪಾಲಿಸಿಗಳಲ್ಲಿ ಯಾವತ್ತೂ ಕನಿಷ್ಠ ಕವರೇಜ್ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳದಿರಿ. ನಿಮ್ಮ ಅಗತ್ಯಗಳಿಗೆ ತಕ್ಕಂತೆ ಪ್ಲಾನ್‌ಗಳು ಮತ್ತು ಪ್ರೀಮಿಯಂಗಳನ್ನು ಹೋಲಿಕೆ ಮಾಡಿ.ನೀವು ಹಾಕಿಕೊಂಡಿರುವ ಬಜೆಟ್ ಮತ್ತು ನಿಮ್ಮ ಕುಟುಂಬದ ಹಣಕಾಸು ಯೋಗಕ್ಷೇಮದ ದೃಷ್ಟಿಯಿಂದ ಲಗತ್ತಾಗುವ ಪಾಲಿಸಿ ಮತ್ತು ಕವರೇಜ್ ಮೊತ್ತವನ್ನು ನಿರ್ಧ–ರಿಸಲು ಈ ಕ್ಷೇತ್ರದಲ್ಲಿ ಅನುಭವ ಇರುವ ವೃತ್ತಿಪರರ ಮಾರ್ಗದರ್ಶನವನ್ನು ಪಡೆಯಲು ಮರೆಯದಿರಿ.

ಬದುಕು ಯಾವತ್ತು ಲಗಾಟಿ ಹೊಡೆಯುತ್ತದೆ ಎಂಬುದನ್ನು ಯಾರೂ ಊಹಿಸಲು ಸಾಧ್ಯವಿಲ್ಲ. ಹಾಗಾಗಿ ಮಾನಸಿಕ ನೆಮ್ಮದಿಗಾಗಿ ಜೀವವಿಮೆಯಲ್ಲಿ ಹೂಡಿಕೆಯನ್ನು ಮಾಡಿ ಮತ್ತು ನಿಮ್ಮ ಪ್ರೀತಿಪಾತ್ರರು ಸುಭದ್ರ ಎನ್ನುವುದನ್ನು ಖಾತರಿಗೊಳಿಸಿ.


INSPIRE INDIA
WEALTH PVT LTD

ಹೂಡಿಕೆ ವೇಳೆ -ನೆನಪಿರಲಿ ಇನ್‌ಸ್ಪೈರ್ ಇಂಡಿಯಾ ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು




ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ಧಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.



**ಇನಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.**
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004
**9035414414, 080-42129917**
**info@inspireindiafs.com**


**'ಜೀವನದಲ್ಲಿ ಸೋಲುವುದು ತಪ್ಪಲ್ಲ, ಆದರೆ ಅಲ್ಪ ಗುರಿಗಳನ್ನು ಇಟ್ಟುಕೊಳ್ಳುವುದು ತಪ್ಪು.'**